

# ಮಗಳ ಜಡೆ, ಅಪ್ಪನ ಹೆಣಿಗೆ

**ಮಗಳಿಗೆ ಜಡೆ ಹಾಕುವುದು ಅಪ್ಪಂದಿರ ಪಾಲಿಗೆ ಸುಲಭಕ್ಕೆ ಅರ್ಥವಾಗದ ಸಿಕ್ಕು. ಆ ಸಿಕ್ಕನ್ನು ಬಿಡಿಸಿಕೊಂಡು, ಪ್ರೀತಿಯ ಹೆಣಿಗೆಯಲ್ಲಿ ತೊಡಗುವುದು ಕಷ್ಟವೇನಲ್ಲ.**

■ ಸ್ವಯಂಪ್ರಭಾ

ಅಪ್ಪ ಮಗಳದು ಮೌನವಾಗಿ ಹಬ್ಬಿಕೊಳ್ಳುವ ವಿಶೇಷವಾದ ಬಾಂಧವ್ಯ. ಅಲ್ಲಿ ಮಾತುಗಳಿಗೆ ಹೆಚ್ಚಿನ ಅವಕಾಶವಿಲ್ಲ. ವಾತ್ಸಲ್ಯದ ಒರತೆಗೆ ಮಾತ್ರ ಕೊರತೆಯಿಲ್ಲ. ಅಪ್ಪ ಎಷ್ಟೇ ಎತ್ತರಕ್ಕೆ ಬೆಳೆದಿರಲಿ, ಮಗಳ ಶೂ ಲೇಸ್ ಕಟ್ಟಲು ಆಕೆಯ ಪಾದದ ಬಳಿಗೆ ಬಾಗಲೇಬೇಕು ಎಂಬುದು ಹೆಚ್ಚು ಬಳಕೆಯಲ್ಲಿರುವ ಗಾದೆ. ಈ ಗಾದೆಯ ವಾಚ್ಯಾರ್ಥಕ್ಕಿಂತ, ಅಪ್ಪ ಮಗಳ ಪ್ರೀತಿಯ ಧ್ವನ್ಯರ್ಥವನ್ನು ನಾವು ಗಮನಿಸಬೇಕು.

ಇತ್ತೀಚೆಗೆ ‘ಬಿಬಿಸಿ’ ಒಂದು ಪುಟ್ಟ ನುಡಿಚಿತ್ರವನ್ನು ಪ್ರಕಟಿಸಿತ್ತು. ಅಪ್ಪನೊಬ್ಬ ಪುಟ್ಟ ಮಗಳಿಗೆ ಯಬರಾ ತಬರಾ ಜಡೆ ಬಿಗಿದು, ತುದಿಯಲ್ಲಿ ರಬ್ಬರ್ ಬ್ಯಾಂಡ್ ಹಾಕಲು ಪೇಚಾಡುತ್ತಿದ್ದ ಆ ಫೋಟೊ ಎಷ್ಟು ಆಕರ್ಷಕವಾಗಿತ್ತೆಂದರೆ, ‘ಅಪ್ಪ ಮಗಳ ಬಗ್ಗೆ ಏನು ಬರೆದಿದ್ದಾರೆ’ ಎಂದು ಓದಲೇಬೇಕು ಅನಿಸಿತು. ಕಳೆದ ವರ್ಷ ಇಂಗ್ಲೆಂಡ್‌ನ ಸೇಂಟ್ ಅಲ್ಬನ್ಸ್‌ನಲ್ಲಿ ಆನಿಸ್ ವ್ಹಾ ಎಂಬ ಮಹಿಳೆಯೊಬ್ಬರು ಒಂದು ವಿಶೇಷ ತರಗತಿಯನ್ನು ಆರಂಭಿಸಿ ಯಶಸ್ವಿಯಾದ ಸುದ್ದಿಯದು.

ಹೆಣ್ಣುಮಕ್ಕಳನ್ನು ಅತಿಯಾಗಿ ಪ್ರೀತಿಸುವ ಅಪ್ಪಂದಿರು, ತಮ್ಮ ಪ್ರೀತಿಯನ್ನು ಎದೆಯಲ್ಲಿ ಬಚ್ಚಿಟ್ಟುಕೊಂಡು, ತಬ್ಬಿಬ್ಬಾಗಿ ಸುಮ್ಮನೇ ನಿಲ್ಲುವ ಅನೇಕ ಕ್ಷಣಗಳಿವೆ. ಅಂಥ ಕ್ಷಣಗಳಲ್ಲೊಂದು, ಮಗಳಿಗೆ ಜಡೆ ಹಾಕುವುದು ಹೇಗೆಂದು ತಿಳಿಯದೇ ನಿಲ್ಲುವುದು. ಕೊನೆಗೆ ಅನಿವಾರ್ಯವಾಗಿ ಬಾಚಣಿಗೆ ಸಮೇತ ಮಕ್ಕಳನ್ನು ಶಾಲೆಗೆ ಕಳಿಸುವುದು, ಅಲ್ಲಿ ಆಯಾ ಇದ್ದರೆ ರಿಕ್ವೆಸ್ಟ್ ಮಾಡುವುದು.

ಇಂತಹ ಸಂದರ್ಭವನ್ನು ಗಮನಿಸಿದ ಆನಿಸ್ ವ್ಹಾ, ಪುರುಷರಿಗಾಗಿ ಜಡೆ ಹೆಣೆಯುವ ತರಗತಿಯನ್ನು ಆರಂಭಿಸಿದರು. ಅಚ್ಚರಿಯೆಂಬಂತೆ ತರಗತಿಗೆ ಅನೇಕ ಮಂದಿ ಸೇರಿಕೊಂಡರು. ಗಂಡಸರು ಮಕ್ಕಳ ಪಾಲನೆ ಪೋಷಣೆಯ ಗೊಡವೆಗೆ ಬರುವುದಿಲ್ಲ ಎಂಬ ಮಾತು ಎಷ್ಟೊಂದು ಪೂರ್ವಗ್ರಹ ಪೀಡಿತ ಅನಿಸುವಂತೆ ಮಾಡಿದರು.

ತರಗತಿಯಲ್ಲಿ ಭಾಗವಹಿಸಿದ, ನಾಲ್ಕು ಹೆಣ್ಣುಮಕ್ಕಳ ತಂದೆ ಜಾನ್ ಹಾರ್ಡನ್ ಅವರಿಗೆ ಆ ತರಗತಿ ತುಂಬಾ ಸಹಕಾರಿ ಆಯಿತಂತೆ. ಮಕ್ಕಳಿಗೆ ಜಡೆ ಹಾಕುವುದನ್ನು ಕಲಿಯುವುದಷ್ಟೇ ಅವರ ಉದ್ದೇಶವಾಗಿರಲಿಲ್ಲ. ‘ಜಡೆ ಹಾಕುವುದು ಹೆಂಗಸರ ಕೆಲಸ ಎಂದು ಮಗಳು ಪರಿಭಾವಿಸಬಾರದು. ತಾನೂ ಜಡೆ ಹಾಕಬಲ್ಲೆ ಎಂಬುದನ್ನು ಸಾಬೀತುಮಾಡಲು ನಾನು ತರಗತಿ ಸೇರಿಕೊಂಡೆ. ಅಲ್ಲಿ ಹೋದಮೇಲೆ, ಕಲಿಕೆಯು ಹೆಚ್ಚು ಖುಷಿ ಕೊಟ್ಟಿತು’ ಎಂದು ಜಾನ್ ಹೇಳಿಕೊಂಡಿದ್ದಾರೆ. ತರಗತಿಯಲ್ಲಿ ಭಾಗವಹಿಸಿದ ಟಿಮ್ ಆಂಗೋವ್ ಕೂಡ, ‘ಜಡೆ ಹಾಕುವುದನ್ನು ಎಲ್ಲ ಅಪ್ಪಂದಿರು ಕಲಿಯಬೇಕು’ ಎಂದಿದ್ದಾರೆ.

‘ಬಿಬಿಸಿ’ ಪ್ರಕಟಿಸಿದ ಈ ಸುದ್ದಿಯನ್ನು ಇನ್‌ಸ್ಟಾಗ್ರಾಂನಲ್ಲಿ ಓದಿರುವ ಸಾವಿರಾರು ಮಂದಿ ಕಮೆಂಟು ದಾಖಲಿಸಿದ್ದಾರೆ. ಆ ಕಮೆಂಟುಗಳ ವಿಭಾಗ ಓದುವುದಕ್ಕೆ ಭಾರೀ ಮಜವಾಗಿದೆ. ಜಡೆ ಹೆಣೆಯುವುದು ಹೆಂಗಸರ ವಿಚಾರ ಎಂದು ಯಾಕಾದರೂ ಬಿಟ್ಟುಕೊಡಬೇಕು ಹೇಳಿ ಎಂದು ಕೆಲವು ಅಪ್ಪಂದಿರು ಪ್ರಶ್ನಿಸಿದ್ದಾರೆ. ‘ನಾನು ಅಮ್ಮನಾಗಿದ್ದರೂ, ಮಗಳ ಜಡೆ ಹೆಣೆಯುವುದು ನನಗೆ ಗೊತ್ತಿಲ್ಲ’ ಎಂದು ಹೇಳಿರುವ ಅಮ್ಮಂದಿರೂ ಇದ್ದಾರೆ. ‘ನನ್ನ ಅಪ್ಪ ಜಡೆ ಹೆಣೆಯಲು ಪೇಚಾಡುತ್ತಿದ್ದುದನ್ನು ನೆನಪಿಸಿಕೊಂಡು ನಗು ಬರುತ್ತಿದೆ. ಆ ಪೇಚಾಟವೇ ಅವರ ಪ್ರೀತಿಯ ಸಂಕೇತವಾಗಿತ್ತು’ ಎಂದು ಕೆಲವು ಹೆಣ್ಣುಮಕ್ಕಳು ನೆನಪುಗಳ ನವಿಲುಗರಿಗಳನ್ನು ನೇವರಿಸಿದ್ದಾರೆ.

ಕಲಿಕೆಯ ಪ್ರಕ್ರಿಯೆ ಬಗ್ಗೆ ಅನಿಸ್ ವ್ಹಾ ಅವರ ಪ್ರತಿಕ್ರಿಯೆ ಹೀಗಿದೆ: ‘ಜಡೆ ಹೆಣೆಯುವ ಮುನ್ನ ಪೋನಿ ಬಿಗಿದು ರಬ್ಬರ್ ಬ್ಯಾಂಡ್ ಹಾಕುವುದನ್ನು ಹೇಳಿಕೊಟ್ಟ ಬಳಿಕ ಎಸಳು ತೆಗೆದು ಹೆಣೆಯುವುದನ್ನು ಕಲಿಸಬೇಕಾಯಿತು. ಮಹಿಳೆಯರಿಗೆ ಕೂದಲಿನ ಅನೇಕ ವಿಚಾರಗಳ ಅರಿವು ಸಹಜವಾಗಿಯೇ ಇರುತ್ತದೆ. ಆದರೆ ಪುರುಷರಿಗೆ ಚಿಕ್ಕ ಚಿಕ್ಕ ವಿಷಯವನ್ನೂ ಹೇಳಿಕೊಡಬೇಕಾಗುತ್ತದೆ. ಆದರೆ ಜಡೆ ಹೆಣಿಗೆಯ ಕೆಲಸದಲ್ಲಿ ಅವರೂ ಅಷ್ಟೇ ಆಸಕ್ತಿಯಿಂದ ಭಾಗವಹಿಸಿದ್ದರು. ಎಲ್ಲರೂ ಬಹಳ ಮುತುವರ್ಜಿಯಿಂದ ಕೂದಲ ಸಿಕ್ಕು ಬಿಡಿಸುವುದನ್ನು ಕಲಿತುಕೊಂಡರು.’

ಜಡೆ ಹೆಣಿಗೆಯ ತರಗತಿಯನ್ನು ಆರಂಭಿಸುವಾಗ, ತಕ್ಷಣಕ್ಕೆ ಯಾರೂ ಸೇರಿಕೊಳ್ಳಲಿಲ್ಲ. ಲಾಕ್‌ಡೌನ್ ಸಂದರ್ಭದಲ್ಲಿ ಶಾಲಾ ತರಗತಿಗಳ ವಿನ್ಯಾಸ ಬದಲಾಗಿತ್ತು. ಅಪ್ಪಂದಿರು ‘ವರ್ಕ್ ಫ್ರಮ್ ಹೋಮ್’ ಎಂಬ ಚೌಕಟ್ಟಿನಲ್ಲಿದ್ದಾಗ, ಮನೆಯೊಳಗಿನ ವಿಚಾರಗಳಿಗೆ ಹೆಚ್ಚು ಗಮನಹರಿಸುವುದು ಸಾಧ್ಯವಾಗಿತ್ತು. ಈ ಕೆಲಸವನ್ನು ನಾನೂ ಮಾಡಬೇಕು ಎಂಬ ಉತ್ಸಾಹ ಅಪ್ಪಂದಿರಲ್ಲಿ ಮೂಡಿರಬಹುದು. ಜಡೆ ಹೆಣೆಯುವುದನ್ನು ಕಲಿತ ಬಳಿಕ, ಆ ಪ್ರಕ್ರಿಯೆಯಲ್ಲಿ ಇರುವ ಸಂತೋಷ ಎಂತಹುದು ಎಂಬುದನ್ನು ಗುರುತಿಸುವುದು ಅವರಿಗೆ ಸಾಧ್ಯವಾಗಿರಬಹುದು ಎಂದು ಅನೇಕರು ಪ್ರತಿಕ್ರಿಯಿಸಿದ್ದಾರೆ.

ಜಡೆ ಹೆಣಿಗೆಯ ತರಗತಿಗಳು ನಮ್ಮಲ್ಲಿ ನಡೆದರೆ ಅಪ್ಪಂದಿರ ಪ್ರತಿಕ್ರಿಯೆ ಹೇಗಿರುತ್ತದೆ?

ಪ್ರತಿಕ್ರಿಯಿಸಿ: feedback@sudha.co.in